# 102/2025-K

| Question Booklet Alpha Code | A | Question Booklet Serial Number |
|---|---|---|

| Total Number of Questions : 100 | Time : 1 Hour 30 Minutes |
|---|---|
| Maximum Marks : 100 | |

A

## INSTRUCTIONS TO CANDIDATES

1. The question paper will be given in the form of a Question Booklet. There will be four versions of question booklets with question booklet Alpha Code viz. A, B, C & D.
2. The Question Booklet Alpha Code will be printed on the top left margin of the facing sheet of the question booklet.
3. The Question Booklet Alpha Code allotted to you will be noted in your seating position in the Examination Hall.
4. If you get a question booklet where the Alpha Code does not match to the allotted Alpha Code in the seating position, please draw the attention of the Invigilator IMMEDIATELY.
5. The Question Booklet Serial Number is printed on the top right margin of the facing sheet. If your question booklet is unnumbered, please get it replaced by new question booklet with same Alpha Code.
6. The question booklet will be sealed at the middle of the right margin. Candidate should not open the question booklet until the indication is given to start answering.
7. Immediately after the commencement of the examination, the candidate should check that the question booklet supplied to him/her contains all the 100 questions in serial order. The question booklet does not have unprinted or torn or missing pages and if so, he/she should bring it to the notice of the Invigilator and get it replaced by a complete booklet with same Alpha Code. This is most important.
8. A blank sheet of paper is attached to the question booklet. This may be used for rough work.
9. **Please read carefully all the instructions on the reverse of the Answer Sheet before marking your answers.**
10. Each question is provided with four choices (A), (B), (C) and (D) having one correct answer. Choose the correct answer and darken the bubble corresponding to the question number using Blue or Black Ball Point Pen in the OMR Answer Sheet.
11. **Each correct answer carries 1 mark and for each wrong answer 1/3 mark will be deducted. No negative mark for unattended questions.**
12. No candidate will be allowed to leave the examination hall till the end of the session and without handing over his/her Answer Sheet to the Invigilator. Candidates should ensure that the Invigilator has verified all the entries in the Register Number Coding Sheet and that the Invigilator has affixed his/her signature in the space provided.
13. Strict compliance of instructions is essential. Any malpractice or attempt to commit any kind of malpractice in the Examination will result in the disqualification of the candidate.

DO NOT WRITE HERE

1. ರಾಷ್ಟ್ರದ ಸ್ಥಾಪಕ ನಾಯಕನನ್ನೇ ರಾಷ್ಟ್ರಪತಿ ಸ್ಥಾನದಿಂದ ಕೆಳಗಿಳಿಸಿದ ದೇಶ ಯಾವುದು?
(A) ಈಜಿಪ್ಟ್
(B) ಬಾಂಗ್ಲಾದೇಶ
(C) ಮ್ಯಾನ್ಮಾರ್
(D) ಶ್ರೀಲಂಕಾ

2. "ಚಿನಾಂಬಾಸ್" ಎಂದು ಕರೆಯಲ್ಪಡುವ ಕೃತಕ ದ್ವೀಪಗಳು ಯಾವ ಸಂಸ್ಕೃತಿಗೆ ಸಂಬಂಧಿಸಿವೆ?
(A) ಚೀನೀ ಸಂಸ್ಕೃತಿ
(B) ಮಾಯನ್ ಸಂಸ್ಕೃತಿ
(C) ಆಸ್ಟೆಕ್ ಸಂಸ್ಕೃತಿ
(D) ಇಂಕಾ ಸಂಸ್ಕೃತಿ

3. ಈ ಕೆಳಗಿನ ಯಾವ ಹೇಳಿಕೆಗಳು ಪೋರ್ಚುಗೀಸರಿಗೆ ಸಂಬಂಧಿಸಿಲ್ಲ?
(A) 1663 ರಲ್ಲಿ ಕೊಚ್ಚಿನ್‌ನ್ನು ವಶಪಡಿಸಿಕೊಳ್ಳಲಾಯಿತು.
(B) ಮಿಶ್ರ ವಸಾಹತು ವ್ಯವಸ್ಥೆಯನ್ನು ಸ್ಥಾಪಿಸಲಾಯಿತು
(C) ಕಾರ್ಟೇಶಿಯನ್ ವ್ಯವಸ್ಥೆಯನ್ನು ಸ್ಥಾಪಿಸಲಾಯಿತು
(D) ಗೋವಾವನ್ನು ಬಿಜಾಪುರದ ಸುಲ್ತಾನನಿಂದ ವಶಪಡಿಸಿಕೊಳ್ಳಲಾಯಿತು.

4. ಕೆಳಗಿನ ಪಟ್ಟಿಯನ್ನು ಪರಿಶೀಲಿಸಿ ಮತ್ತು ವರ್ಗ B ಯಿಂದ ವರ್ಗ A ಗೆ ಸೂಕ್ತವಾದವುಗಳನ್ನು ಆರಿಸಿ ಮತ್ತು ಸರಿಯಾದ ಉತ್ತರವನ್ನು ಬರೆಯಿರಿ.

| A | B |
|---|---|
| a. ಜೆ.ಎಂ. ಚಟರ್ಜಿ | i. ಅಭಿನವ ಭಾರತ್ |
| b. ಬರೀಂದ್ರನಾಥ ಘೋಷ್ | ii. ಹಿಂದುಸ್ಥಾನ್ ರಿಪಬ್ಲಿಕನ್ ಅಸೋಸಿಯೇಷನ್ |
| c. ಚಂದ್ರಶೇಖರ್ ಆಜ಼ಾದ್ | iii. ಭಾರತ್ ಮಾತಾ ಸೊಸೈಟಿ |
| d. ವಿ.ಡಿ. ಸಾವರ್ಕರ್ | iv. ಅನುಶೀಲನ ಸಮಿತಿ |

(A) a – iv, b – i, c – iii, d – ii
(B) a – i, b – iv, c – ii, d – iii
(C) a – ii, b – iii, c – i, d – iv
(D) a – iii, b – iv, c – ii, d – i

5. ಆರಾದಲ್ಲಿ 1857 ರ ದಂಗೆಯನ್ನು ಮುನ್ನಡೆಸಿದ ನಾಯಕ
(A) ನಾನಾ ಸಾಹಿಬ್
(B) ಭಕ್ತ್ ಖಾನ್
(C) ಕುನ್ವರ್ ಸಿಂಗ್
(D) ಬಹದ್ದೂರ್ ಖಾನ್

6. ಈ ಕೆಳಗಿನ ಘಟನೆಗಳನ್ನು ಕಾಲಾನುಕ್ರಮದಲ್ಲಿ ಜೋಡಿಸಿ

a. ಕುರಿಚ್ಯ ದಂಗೆ

b. ಸನ್ಯಾಸಿ ದಂಗೆ

c. ಸಂತಾಲ್ ದಂಗೆ

d. ಪಳಶ್ಶಿ ದಂಗೆ

(A) b, d, a, c

(B) c, d, a, b

(C) b, c, d, a

(D) a, c, b, d

7. ನದಿಗಳ ಮೇಲ್ಭಾಗದ ಬಗ್ಗೆ ಈ ಕೆಳಗಿನವುಗಳಲ್ಲಿ ಯಾವುದು ಸರಿಯಾದ ಹೇಳಿಕೆಯಾಗಿದೆ?

(A) ಮೇಲ್ಭಾಗದ ಪ್ರದೇಶಗಳಲ್ಲಿ , ಅನೇಕ ತೊರೆಗಳು ಒಟ್ಟಿಗೆ ಸೇರಿ ಹೊಳೆಗಳನ್ನು ರೂಪಿಸುತ್ತವೆ.

(B) ನದಿಯ ಮೇಲ್ಭಾಗದಲ್ಲಿ ನದೀ ಮುಖಜ ಭೂಮಿ ರೂಪುಗೊಳ್ಳುತ್ತವೆ.

(C) ಮೇಲ್ಭಾಗದಲ್ಲಿ , Oxbow lakes ಸರೋವರಗಳು ಪರ್ವತ ಪ್ರದೇಶಗಳಲ್ಲಿ ಕಂಡುಬರುತ್ತವೆ.

(D) ನದಿಗಳ ಮೇಲ್ಭಾಗವು ಸೂಕ್ಷ್ಮವಾದ ಮರಳಿನ ಪದರಗಳಿಂದ ಸಮೃದ್ಧವಾಗಿರುತ್ತದೆ.

8. ಸಿಂಧೂ ನದಿಯ ಪೂರ್ವ ಉಪನದಿಗಳು

(A) ರವಿ, ಬಿಯಾಸ್, ಸಟ್ಲೆಜ್

(B) ಸಿಂಧೂ, ಝೀಲಂ, ಚೆನಾಬ್

(C) ಝೀಲಂ, ಬಿಯಾಸ್, ರವಿ

(D) ಚೆನಾಬ್, ಬಿಯಾಸ್, ಸಿಂಧೂ

9. ವಾತಾವರಣದ ಪದರವಾದ ಹವಾಗೋಲ (Troposphere) ದಲ್ಲಿ ಉಂಟಾಗುವ ಶಾಖ ನಷ್ಟದ ದರದ ಬಗ್ಗೆ ಈ ಕೆಳಗಿನವುಗಳಲ್ಲಿ ಯಾವುದು ಸರಿಯಾದ ಹೇಳಿಕೆಯಾಗಿದೆ?

(A) ಪ್ರತಿ 175 ಮೀಟರ್ ಎತ್ತರಕ್ಕೆ ತಾಪಮಾನವು 1°C ದರದಲ್ಲಿ ಕಡಿಮೆಯಾಗುತ್ತದೆ.

(B) ಪ್ರತಿ 165 ಮೀಟರ್ ಎತ್ತರಕ್ಕೆ ತಾಪಮಾನವು 1°C ದರದಲ್ಲಿ ಕಡಿಮೆಯಾಗುತ್ತದೆ.

(C) ಪ್ರತಿ 175 ಮೀಟರ್ ಎತ್ತರಕ್ಕೆ ತಾಪಮಾನವು 1°C ದರದಲ್ಲಿ ಹೆಚ್ಚಾಗುತ್ತದೆ.

(D) ಪ್ರತಿ 165 ಮೀಟರ್ ಎತ್ತರಕ್ಕೆ ತಾಪಮಾನವು 1°C ದರದಲ್ಲಿ ಹೆಚ್ಚಾಗುತ್ತದೆ.

10. ನಿತ್ಯಹರಿದ್ವರ್ಣ ಕಾಡುಗಳು ಹೆಚ್ಚಾಗಿ ಕಂಡುಬರುವ ಹವಾಮಾನ ಪ್ರದೇಶ

(A) ಸಮಭಾಜಕ ಹವಾಮಾನ ಪ್ರದೇಶ

(B) ಮೆಡಿಟರೇನಿಯನ್ ಹವಾಮಾನ ಪ್ರದೇಶ

(C) ಸವನ್ನಾ ಹವಾಮಾನ ಪ್ರದೇಶ

(D) ಪಾಚಿ ಬಯಲು (ತುಂಡ್ರ) ಹವಾಮಾನ ಪ್ರದೇಶ

11. ಧುಂದರ್ ಜಲಪಾತ ಯಾವ ನದಿಯಲ್ಲಿ ಕಂಡುಬರುತ್ತದೆ?

(A) ತಪತಿ

(B) ನರ್ಮದಾ

(C) ಸೋನಾ

(D) ಬೆಟ್ವಾ

12. ಟ್ರೈಪನೊಸೋಮಿಯಾಸಿಸ್ ಪರಾವಲಂಬಿ ರೋಗಕ್ಕೆ ಕಾರಣವಾಗುವ ಜೀವಿ

(A) ಬ್ಯಾಕ್ಟ್ರೋಸೆರಾ ಕುಕುರ್ಬಿಟೆ

(B) ಡ್ರೊಸೊಫಿಲಾ ಮೆಲನೊಗ್ಯಾಸ್ಟರ್

(C) ಮಸ್ಕಾ ಡೊಮೆಸ್ಟಿಕಾ

(D) ತ್ಸೆತ್ಸೆ ನೊಣ

13. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಹೆಚ್ಚಿನ ಬೇಡಿಕೆಯಿರುವ ಪ್ರಮುಖ ಬೆಳೆ 'ಅರೇಬಿಕಾ' ಯಾವುದಕ್ಕೆ ಸಂಬಂಧಿಸಿದೆ?

(A) ಚಹಾ

(B) ಕಾಫಿ

(C) ಮೆಕ್ಕೆ ಜೋಳ

(D) ಕಬ್ಬು

14. ಸಾಂಪ್ರದಾಯಿಕ ಇಂಧನ ಮೂಲಗಳಲ್ಲಿ ಕೆಳಗಿನ ಯಾವುದನ್ನು ಸೇರಿಸಲಾಗಿಲ್ಲ?

(A) ಸೌರಶಕ್ತಿ

(B) ಅಲೆ ಶಕ್ತಿ

(C) ಪೆಟ್ರೋಲಿಯಂ

(D) ಪವನ ಶಕ್ತಿ

15. ವಿಶ್ವ ಆರ್ಥಿಕ ವೇದಿಕೆಯ ಶಾಶ್ವತ ವಿಳಾಸ ಯಾವುದು?

(A) ದಾವೋಸ್

(B) ಲಂಡನ್

(C) ದೆಹಲಿ

(D) ಪ್ಯಾರಿಸ್

16. ಪಾವತಿ ಬ್ಯಾಂಕುಗಳ ವೈಶಿಷ್ಟ್ಯಗಳೇನು?

i) ವ್ಯಕ್ತಿಗಳಿಂದ 1 ಲಕ್ಷ ರೂ. ಗಳವರೆಗಿನ ಠೇವಣಿಗಳನ್ನು ಸ್ವೀಕರಿಸುತ್ತದೆ.

ii) ಅವುಗಳು ಸಾಲ ನೀಡುತ್ತವೆ

iii) ಡೆಬಿಟ್ ಕಾರ್ಡ್‌ಗಳನ್ನು ನೀಡುವುದಿಲ್ಲ

iv) ಭಾರತೀಯ ರಿಸರ್ವ್ ಬ್ಯಾಂಕ್ ನಿಗದಿಪಡಿಸಿದ ಬಡ್ಡಿದರಗಳನ್ನು ಠೇವಣಿಗಳ ಮೇಲೆ ಪಾವತಿಸಲಾಗುತ್ತದೆ.

(A) i ಮತ್ತು iii ಸರಿ.

(B) ii ಮತ್ತು iv ಸರಿ.

(C) ii ಮತ್ತು iii ಸರಿ.

(D) i ಮತ್ತು iv ಸರಿ.

17. ಭಾರತವು ಯಾವ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ವಿಶ್ವ ವ್ಯಾಪಾರ ಸಂಸ್ಥೆಯ ಸದಸ್ಯ ರಾಷ್ಟ್ರವಾಯಿತು?

(A) ಒಂಬತ್ತನೇ ಪಂಚವಾರ್ಷಿಕ ಯೋಜನೆ

(B) ಎಂಟನೇ ಪಂಚವಾರ್ಷಿಕ ಯೋಜನೆ

(C) ಏಳನೇ ಪಂಚವಾರ್ಷಿಕ ಯೋಜನೆ

(D) ಹತ್ತನೇ ಪಂಚವಾರ್ಷಿಕ ಯೋಜನೆ

18. ಭಾರತೀಯ ರಿಸರ್ವ್ ಬ್ಯಾಂಕಿನ ಒಳಗೆ ಮತ್ತು ಹೊರಗೆ ಕಾಗದದ ಬಳಕೆಯನ್ನು ಕಡಿಮೆ ಮಾಡಲು ಡಿಜಿಟಲ್ ಯೋಜನೆಗಳು ಯಾವುವು?

(A) ಉದ್ಗಮ್, ಉತ್ಕಲ್

(B) ಸಂಚಯ, ಸಾಂಖ್ಯ

(C) ಸಾರಥಿ, ಪ್ರವಾಹ್

(D) ಸುಲೇಖ, ಸೇವನ

19. ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಿಂದ ಹಿಂದಿರುಗುವ ಪ್ರಯಾಣದಲ್ಲಿ ಸುನೀತಾ ವಿಲಿಯಮ್ಸ್ ಮತ್ತು ಬುಚ್ ವಿಲ್ಮೋರ್ ಬಳಸಿದ ಬಾಹ್ಯಾಕಾಶ ನೌಕೆಯ ಹೆಸರೇನು?

(A) ಸ್ಟಾರ್‌ಲೈನರ್

(B) ಡಿಸ್ಕವರಿ

(C) ಕೊಲಂಬಿಯಾ

(D) ಡ್ರ್ಯಾಗನ್

20. ಸಂವಿಧಾನ ಸಭೆಯಲ್ಲಿ 17 ಮಲಯಾಳಿ ಸದಸ್ಯರಿದ್ದರು. ಈ ಕೆಳಗಿನವರಲ್ಲಿ ತಿರುವಾಂಕೂರು ಪ್ರಾಂತ್ಯದ ಸದಸ್ಯರು ಯಾರು?

(A) ಕೆ. ಎ. ಮುಹಮ್ಮದ್

(B) ಪಣಂಪಲ್ಲಿ ಗೋವಿಂದ ಮೆನನ್

(C) ಎ.ಕೆ. ಮೆನನ್

(D) ಕೆ. ಮಾಧವ ಮೆನನ್

21. ಭಾರತೀಯ ಸಂವಿಧಾನದಲ್ಲಿ ಅಳವಡಿಸಲಾಗಿರುವ ಸಾಮಾಜಿಕ ನ್ಯಾಯ, ಆರ್ಥಿಕ ನ್ಯಾಯ ಮತ್ತು ರಾಜಕೀಯ ನ್ಯಾಯ ಎಂಬ ಮೂರು ವಿಧದ ನ್ಯಾಯಗಳನ್ನು ಎಲ್ಲಿಂದ ಎರವಲು ಪಡೆಯಲಾಗಿದೆ?

(A) ಫ್ರೆಂಚ್ ಕ್ರಾಂತಿಯಿಂದ

(B) ರಷ್ಯಾದ ಕ್ರಾಂತಿಯಿಂದ

(C) ಅಮೇರಿಕನ್ ಸಂವಿಧಾನದಿಂದ

(D) ದಕ್ಷಿಣ ಆಫ್ರಿಕಾದಿಂದ

22. ಭಾರತದ ಹೊರಗೆ ಎಷ್ಟು ವರ್ಷಗಳ ಕಾಲ ನಿರಂತರವಾಗಿ ವಾಸಿಸಿದ್ದಕ್ಕಾಗಿ ಕೇಂದ್ರ ಸರ್ಕಾರವು ವ್ಯಕ್ತಿಯ ಪೌರತ್ವವನ್ನು ರದ್ದುಗೊಳಿಸಬಹುದು?

(A) 7 ವರ್ಷಗಳು

(B) 5 ವರ್ಷಗಳು

(C) 10 ವರ್ಷಗಳು

(D) 12 ವರ್ಷಗಳು

23. ಸಂವಿಧಾನದಲ್ಲಿ ಮೂಲಭೂತ ಕರ್ತವ್ಯಗಳನ್ನು ಯಾವ ತಿದ್ದುಪಡಿಯ ಮೂಲಕ ಸೇರಿಸಲಾಗಿದೆ?

(A) 73ನೇ ತಿದ್ದುಪಡಿ

(B) 44ನೇ ತಿದ್ದುಪಡಿ

(C) 42ನೇ ತಿದ್ದುಪಡಿ

(D) 52ನೇ ತಿದ್ದುಪಡಿ

24. ಈ ಕೆಳಗಿನವುಗಳಲ್ಲಿ ಯಾವುದು ಕೇಂದ್ರ ಸರ್ಕಾರದ ಪಟ್ಟಿಯಲ್ಲಿದೆ?

(A) ಮೀನುಗಾರಿಕೆ

(B) ಕೃಷಿ ಆದಾಯ ತೆರಿಗೆ

(C) ಬೆಲೆ ನಿಯಂತ್ರಣ

(D) ಲಾಟರಿ

25. ಭಾರತದಲ್ಲಿ ತನ್ನದೇ ಆದ ಉಪಗ್ರಹವನ್ನು ಉಡಾವಣೆ ಮಾಡಿದ ಮೊದಲ ರಾಜ್ಯ ಯಾವುದು?

(A) ಅಸ್ಸಾಂ

(B) ಮಹಾರಾಷ್ಟ್ರ

(C) ಗುಜರಾತ್

(D) ಕರ್ನಾಟಕ

26. ಕ್ರಮದಲ್ಲಿ ಬರೆಯಿರಿ.

| | |
|---|---|
| i) ನನ್ನ ಆರೋಗ್ಯ ನನ್ನ ಹಕ್ಕು | a) ಯೋಗ ದಿನ |
| ii) ನಮ್ಮ ಹಕ್ಕುಗಳು ಈಗ ನಮ್ಮ ಭವಿಷ್ಯ | b) ಭೂ ದಿನದ ಥೀಮ್ 2025 |
| iii) ನಮ್ಮ ಶಕ್ತಿ ನಮ್ಮ ಭೂಮಿ | c) ವಿಶ್ವ ಆರೋಗ್ಯ ದಿನ |
| iv) ಸ್ವಯಂ ಮತ್ತು ಸಮಾಜಕ್ಕಾಗಿ ಯೋಗ | d) ಮಾನವ ಹಕ್ಕುಗಳ ದಿನ |

(A) i – c, ii – d, iii – b, iv – a
(B) i – d, ii – b, iii – a, iv – c
(C) i – c, ii – a, iii – b, iv – d
(D) i – b, ii – c, iii – d, iv – a

27. ಶಾಲಾ ಮಕ್ಕಳಲ್ಲಿ ಮಾದಕ ವಸ್ತುಗಳ ಬಳಕೆಯನ್ನು ತಡೆಗಟ್ಟಲು ಅಬಕಾರಿ ಇಲಾಖೆಯ ಅಡಿಯಲ್ಲಿ ವಿಮುಕ್ತಿ ನೇತೃತ್ವದಲ್ಲಿ ಶಾಲೆಗಳಲ್ಲಿ ಯಾವ ಯೋಜನೆಯನ್ನು ಜಾರಿಗೆ ತರಲಾಯಿತು?
(A) ನೇರ್ವಳಿ
(B) ಉಣರ್ವು
(C) ಕರ್ಮಚಾರಿ ಯೋಜನೆ
(D) ಬೀಟ್ಸ್ ಯೋಜನೆ

28. ಲೋಕ ಅದಾಲತ್ ಎಂಬ ಪದವು ಯಾವ ನ್ಯಾಯಾಲಯದ ವರ್ಗಕ್ಕೆ ಸೇರಿದೆ?
(A) ಜನರ ನ್ಯಾಯಾಲಯ
(B) ಮುನ್ಸಿಫ್ ನ್ಯಾಯಾಲಯ
(C) ಮ್ಯಾಜಿಸ್ಟ್ರೇಟ್ ನ್ಯಾಯಾಲಯ
(D) ಇವುಗಳಲ್ಲಿ ಯಾವುದೂ ಅಲ್ಲ

29. ಗ್ರಾಮೀಣ ಪ್ರದೇಶಗಳಲ್ಲಿ ಅಂತ್ಯೋದಯ ಮತ್ತು ಅನ್ನ ಯೋಜನೆ ಪಡಿತರ ಚೀಟಿಗಳಿಗೆ ಅಂತಿಮ ಅನುಮೋದನೆ ನೀಡುವವರು ಯಾರು?
(A) ನಗರಾಭಿವೃದ್ಧಿ ಇಲಾಖೆ
(B) ಗ್ರಾಮೀಣಾಭಿವೃದ್ಧಿ ಇಲಾಖೆ
(C) ಗ್ರಾಮೀಣಾಭಿವೃದ್ಧಿ ಸಚಿವಾಲಯ
(D) ಇವುಗಳಲ್ಲಿ ಯಾವುದೂ ಅಲ್ಲ

30. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಮೊದಲು ಜಾರಿಗೆ ತಂದ ಕೇರಳದ ಜಿಲ್ಲೆಗಳು ಯಾವುವು?
(A) ವಯನಾಡ್ ಮತ್ತು ಇಡುಕ್ಕಿ
(B) ಕೊಲ್ಲಂ ಮತ್ತು ಕೊಟ್ಟಾಯಂ
(C) ಪತ್ತನಂತಿಟ್ಟ ಮತ್ತು ತ್ರಿಶೂರ್
(D) ಪಾಲಕ್ಕಾಡ್ ಮತ್ತು ವಯನಾಡ್

31. ಕೇರಳ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರವನ್ನು ಸ್ಥಾಪಿಸಿದಾಗ ಮುಖ್ಯಮಂತ್ರಿ ಯಾರಾಗಿದ್ದರು?
(A) ಉಮ್ಮನ್ ಚಾಂಡಿ
(B) ವಿ.ಎಸ್. ಅಚ್ಯುತಾನಂದನ್
(C) ಪಿಣರಾಯಿ ವಿಜಯನ್
(D) ಎ.ಕೆ. ಆಂಟನಿ

32. ಈ ಕೆಳಗಿನವರಲ್ಲಿ ಕೇರಳದ ಪ್ರಸ್ತುತ ಮುಖ್ಯ ಚುನಾವಣಾ ಆಯುಕ್ತರು ಯಾರು?
(A) ಶಾಜಹಾನ್
(B) ರಾಜೀವ್ ಕುಮಾರ್
(C) ಪ್ರಣಬ್ ಜ್ಯೋತಿನಾಥ್
(D) ಜ್ಞಾನೇಶ್ ಕುಮಾರ್

33. ಕೃಷಿ ಇಲಾಖೆಯ ನೇತೃತ್ವದಲ್ಲಿ ಕೇರಳದ ಮೊದಲ ಕೃಷಿ ಎಕ್ಸ್‌ಪೋ ಕೇಂದ್ರ(ಕೃಷಿ ಪ್ರದರ್ಶನ ಕೇಂದ್ರ)ವು ಎಲ್ಲಿ ತನ್ನ ಕಾರ್ಯಾಚರಣೆಯನ್ನು ಪ್ರಾರಂಭಿಸಿತು?
(A) ಆನಯರ
(B) ಕುಟ್ಟನಾಡ್
(C) ಪಾಲಕ್ಕಾಡ್
(D) ವಯನಾಡ್

34. ಕೇರಳದಲ್ಲಿರುವ ತೃತೀಯ ಹಂತದ ಆರೋಗ್ಯ ಸಂಸ್ಥೆಗಳು ಯಾವುವು?
(A) ಜನರಲ್ ಆಸ್ಪತ್ರೆಗಳು
(B) ತಾಲ್ಲೂಕು ಆಸ್ಪತ್ರೆಗಳು
(C) ವೈದ್ಯಕೀಯ ಕಾಲೇಜುಗಳು
(D) ಸಮುದಾಯ ಆರೋಗ್ಯ ಕೇಂದ್ರಗಳು

35. ಅತ್ಯಂತ ವೈವಿಧ್ಯಮಯ ಪ್ರಾಣಿ ಪ್ರಭೇದಗಳು
(A) ಮೀನುಗಳು
(B) ಪಕ್ಷಿಗಳು
(C) ಸಸ್ತನಿಗಳು
(D) ಕೀಟಗಳು

36. ಫೆಬ್ರವರಿ 2025 ರಲ್ಲಿ ಕೇರಳ ಸರ್ಕಾರ ಪ್ರಾರಂಭಿಸಿದ "ಆರೋಗ್ಯ ಆನಂದಂ" ಯೋಜನೆಯ ಗುರಿ ಏನು?
(A) ಕ್ಯಾನ್ಸರ್ ಜಾಗೃತಿ
(B) ರೇಬೀಸ್ ತಡೆಗಟ್ಟುವಿಕೆ
(C) ಏಡ್ಸ್ ಜಾಗೃತಿ
(D) COVID ತಡೆಗಟ್ಟುವಿಕೆ

37. ಪೆಲ್ಲಾಗ್ರಾ ಯಾವ ವಿಟಮಿನ್ ಕೊರತೆಯಿಂದ ಬರುವ ಕಾಯಿಲೆ?

(A) ವಿಟಮಿನ್ $B_3$

(B) ವಿಟಮಿನ್ C

(C) ವಿಟಮಿನ್ K

(D) ವಿಟಮಿನ್ $B_{12}$

38. ಜೀವಕೋಶದ ಯಾವ ಭಾಗವು ATP ರೂಪದಲ್ಲಿ ಜೀವಕೋಶಕ್ಕೆ ಶಕ್ತಿಯನ್ನು ಉತ್ಪಾದಿಸುತ್ತದೆ ಮತ್ತು ಸಂಗ್ರಹಿಸುತ್ತದೆ?

(A) ಮೈಟೋಕಾಂಡ್ರಿಯಾ

(B) ಗಾಲ್ಗಿ ಸಂಕೀರ್ಣಗಳು

(C) ಲೈಸೋಸೋಮ್‌ಗಳು

(D) ಫಿನೊಮ್ಸ್

39. ಶ್ವಾಸಕೋಶದ ಊತ (ಎಂಫಿಸೆಮಾ) ಎಂಬ ಮಾರಕ ಕಾಯಿಲೆಗೆ ಕಾರಣವೇನು?

(A) ಸೋಂಕು

(B) ವಿಟಮಿನ್ ಕೊರತೆ

(C) ಧೂಮಪಾನ

(D) ಹಾರ್ಮೋನುಗಳ ಅಸಮತೋಲನ

40. $AB^-$ (AB ನೆಗೆಟಿವ್) ರಕ್ತದ ಗುಂಪು ಹೊಂದಿರುವ ವ್ಯಕ್ತಿಯೊಬ್ಬರು ಅಪಘಾತದಿಂದಾಗಿ ಆಸ್ಪತ್ರೆಗೆ ದಾಖಲಾಗಿ ತುರ್ತು ರಕ್ತ ವರ್ಗಾವಣೆಯ ಅಗತ್ಯವಿದ್ದರೆ, ಆ ವ್ಯಕ್ತಿಗೆ ಯಾವ ರಕ್ತದ ಗುಂಪುಗಳನ್ನು ನೀಡಬಹುದು?

(A) $A^+$, $B^+$, $AB^+$, $O^+$

(B) $A^-$, $B^-$, $AB^-$, $O^-$

(C) $AB^-$ ಮಾತ್ರ

(D) $O^-$ ಮಾತ್ರ

41. ಈ ಕೆಳಗಿನ ಹೇಳಿಕೆಗಳಲ್ಲಿ ಯಾವುದು ಸರಿಯಾಗಿದೆ?

i) ಮಲೇರಿಯಾಕ್ಕೆ ಕಾರಣವಾಗುವ ಅಂಶವೆಂದರೆ ವುಚೆರೇರಿಯಾ ಬ್ಯಾಂಕ್ರಾಫ್ಟಿ ಎಂಬ ಹುಳು.

ii) ಮಲೇರಿಯಾ ಹರಡುವ ಸೊಳ್ಳೆ ಅನಾಫಿಲಿಸ್ ಜಾತಿಯ ಹೆಣ್ಣು ಸೊಳ್ಳೆ.

iii) ವಯಸ್ಕ ಮಲೇರಿಯಾ ಹುಳು ದುಗ್ಧರಸ ವ್ಯವಸ್ಥೆ (Lymphatic System) ಯಲ್ಲಿ ವಾಸಿಸುತ್ತದೆ.

iv) ಮಲೇರಿಯಾಕ್ಕೆ ಆನುವಂಶಿಕ ದೋಷಗಳು ಮುಖ್ಯ ಕಾರಣ


(A) i ಮತ್ತು ii ಸರಿ.


(B) i, ii ಮತ್ತು iii ಸರಿ.


(C) i ಮತ್ತು iii ಸರಿ.


(D) iv ಮಾತ್ರ ಸರಿ.

42. ನಿವ್ವಳ ಬಲ (Net force) ಶೂನ್ಯವಾಗಿರುವ ನಕ್ಷೆ ಯಾವುದು?

(A) 


(B) 


(C) 


(D) 


43. ಯಾವ ಅಲೆ ತರಂಗದ ಪ್ರಸರಣಕ್ಕೆ ಮಾಧ್ಯಮ ಬೇಕು?

(A) ಬೆಳಕಿನ ತರಂಗ

(B) ರೇಡಿಯೋ ತರಂಗ

(C) ಧ್ವನಿ ತರಂಗ

(D) ಗಾಮಾ ತರಂಗ

44. ಘರ್ಷಣೆಯಿಲ್ಲದ ಮೇಲ್ಮೈಯಲ್ಲಿ ನಿಶ್ಚಲವಾಗಿರುವ ವಸ್ತುವಿಗೆ ಅನ್ವಯಿಸಲಾದ ಬಲವನ್ನು ಕೆಳಗೆ ಚಿತ್ರಿಸಲಾಗಿದೆ. ಈ ವಸ್ತುವಿನ ವೇಗೋತ್ಕರ್ಷ ಎಷ್ಟು?

8N ← | 10kg | → 20N

(A) $2\ m/s^2$

(B) $0.8\ m/s^2$

(C) $2.8\ m/s^2$

(D) $1.2\ m/s^2$

45. ಸೂರ್ಯನನ್ನು ಅಧ್ಯಯನ ಮಾಡಲು ISRO ಯಾವ ಬಾಹ್ಯಾಕಾಶ ನೌಕೆಯನ್ನು ಉಡಾಯಿಸಿತು?

(A) ಚಂದ್ರಯಾನ – III

(B) ರಿಸ್ಯಾಟ್ (RISAT)

(C) ಆದಿತ್ಯ – ಎಲ್1

(D) ಮಂಗಳಯಾನ

46. ಇತ್ತೀಚೆಗೆ ಸುದ್ದಿಯಲ್ಲಿ ಕಾಣಿಸಿಕೊಂಡ "ಸ್ನೋಬ್ಲೈಂಡ್" ಏನು?

(A) ಕ್ಷುದ್ರಗ್ರಹ

(B) ಸಸ್ತನಿ

(C) ಉಲ್ಕಾಶಿಲೆ

(D) ಮಾಲ್‌ವೇರ್

47. ಒಂದು ಪರಮಾಣುವಿನ M ಕವಚದಲ್ಲಿ 6 ಎಲೆಕ್ಟ್ರಾನ್‌ಗಳಿದ್ದರೆ, ಆ ಪರಮಾಣುವಿನ ಪರಮಾಣು ಸಂಖ್ಯೆ ಎಷ್ಟು?

(A) 6
(B) 8
(C) 16
(D) 10

48. 300°C ನಲ್ಲಿ ಒಂದು ನಿರ್ದಿಷ್ಟ ಅನಿಲ ರಾಶಿಯ ಒತ್ತಡ 1.3 atm. ಪ್ರಸ್ತುತ ಪರಿಮಾಣ 10L. ತಾಪಮಾನದಲ್ಲಿ ಯಾವುದೇ ಬದಲಾವಣೆಯಿಲ್ಲದೆ ಈ ಅನಿಲದ ಪರಿಮಾಣವನ್ನು 2.6L ಗೆ ಇಳಿಸಿದರೆ, ಪ್ರಸ್ತುತ ಒತ್ತಡ ಎಷ್ಟು?

(A) 10 atm

(B) 5 atm

(C) 2.6 atm

(D) 1.3 atm

49. ಕಬ್ಬಿಣದ ಅದಿರಿನ ಮ್ಯಾಗ್ನೆಟೈಟ್ ಅನ್ನು ಅದರ ಕಲ್ಮಶ $SnO_2$ ನಿಂದ ಬೇರ್ಪಡಿಸಲು ಯಾವ ವಿಧಾನವನ್ನು ಬಳಸಬಹುದು?

(A) ಕಾಂತೀಯ ಬೇರ್ಪಡಿಕೆ

(B) ಕ್ಷಾಲನ (ಲೀಚಿಂಗ್)

(C) ತೇಲುವಿಕೆ ಪ್ರಕ್ರಿಯೆ

(D) ತೊಳೆಯುವ ಮೂಲಕ

50. ಕೇರಳದ ಕರಾವಳಿ ಪ್ರದೇಶದ ಕಪ್ಪು ಮರಳಿನಲ್ಲಿ ಕಂಡುಬರುವ ಮತ್ತು ಕೈಗಾರಿಕೆಗಾಗಿ ಬಳಸಲಾಗುವ ಖನಿಜ.

(A) ಇಲ್ಮೆನೈಟ್

(B) ಆಮ್ಲಜನಕ

(C) ಸಾರಜನಕ

(D) ಕಾರ್ಬನ್

51. ಈ ಕೆಳಗಿನ ಯಾವ ಸಂಯುಕ್ತವನ್ನು ನೀರಿನೊಂದಿಗೆ ಬೆರೆಸಿದಾಗ, ಸುಡುವ ಅನಿಲ ಉತ್ಪತ್ತಿಯಾಗುತ್ತದೆ?

(A) ಕ್ಯಾಲ್ಸಿಯಂ ಹೈಡ್ರಾಕ್ಸೈಡ್ ($Ca(OH)_2$)

(B) ಕ್ಯಾಲ್ಸಿಯಂ ಕಾರ್ಬೋನೇಟ್ ($CaCO_3$)

(C) ಕ್ಯಾಲ್ಸಿಯಂ ಕಾರ್ಬೈಡ್ ($CaC_2$)

(D) ಕ್ಯಾಲ್ಸಿಯಂ ನೈಟ್ರೇಟ್ ($CaNO_3$)

52. ಕೇರಳ ಲಲಿತ ಕಲಾ ಅಕಾಡೆಮಿಯ ಪ್ರಸ್ತುತ ಅಧ್ಯಕ್ಷರು ಯಾರು?

(A) ಕೆ. ಸಚ್ಚಿದಾನಂದನ್

(B) ಮುರಳಿ ಚೀರೋತ್

(C) ನೇಮಮ್ ಪುಷ್ಪರಾಜ್

(D) ಕರಿವೆಳ್ಳೂರ್ ಮುರಳಿ

53. 2024 ರ ಪ್ಯಾರಾಲಿಂಪಿಕ್ಸ್‌ನಲ್ಲಿ ಪುರುಷರ ಜಾವೆಲಿನ್ ಥ್ರೋ F41 ವಿಭಾಗದಲ್ಲಿ ಚಿನ್ನದ ಪದಕ ಗೆದ್ದ ಭಾರತೀಯ ಕ್ರೀಡಾ ತಾರೆ ಯಾರು?

(A) ನವದೀಪ್ ಸಿಂಗ್

(B) ನಿತೇಶ್ ಕುಮಾರ್

(C) ಹರ್ವಿಂದರ್ ಸಿಂಗ್

(D) ಪ್ರವೀಣ್ ಕುಮಾರ್

54. ಮಲಯಾಳಿ ಜ್ಞಾನಪೀಠ ಪ್ರಶಸ್ತಿ ವಿಜೇತರು ಮತ್ತು ಅವರು ಗೆದ್ದ ವರ್ಷಗಳ ಜೋಡಿಗಳಲ್ಲಿ ಯಾವುದು ಸರಿಯಾಗಿದೆ?

(A) ಎಸ್.ಕೆ. ಪೊಟ್ಟೆಕಾಟ್ – 1982

(B) ತಕಳಿ ಶಿವಶಂಕರ ಪಿಳ್ಳೈ – 1984

(C) ಒ.ಎನ್.ವಿ. ಕುರುಪ್ – 2009

(D) ಎಂ.ಟಿ. ವಾಸುದೇವನ್ ನಾಯರ್ – 1998

55. ಈ ಕೆಳಗಿನ ಜೋಡಿಗಳಿಂದ ತಪ್ಪಾದ ಜೋಡಿಯನ್ನು ಆರಿಸಿ

i) ಕುಮಾರಗುರುದೇವನ್ – ಪ್ರತ್ಯಕ್ಷರಕ್ಷಾ ದೈವಸಭಾ

ii) ವೈಕುಂಠ ಸ್ವಾಮಿಗಳ್ – ಆತ್ಮವಿದ್ಯಾ ಸಂಘ

iii) ಪಂಡಿತ್ ಕೆ.ಪಿ.ಕರುಪ್ಪನ್ – ಆರ್ಯಸಮಾಜಂ

iv) ಅಯ್ಯಂಕಾಳಿ – ಸಮತ್ವಸಮಾಜಂ

(A) i ಮಾತ್ರ

(B) ii ಮತ್ತು iv

(C) ii ಮತ್ತು iii

(D) i ಮತ್ತು iii

56. ಮೊದಲ ಮಲಯಾಳಂ ಪತ್ರಿಕೆ "ರಾಜ್ಯಸಮಾಚಾರ" ಎಲ್ಲಿಂದ ಪ್ರಕಟವಾಯಿತು?

(A) ವಕ್ಕಂ

(B) ಇಲ್ಲಿಕ್ಕುನ್ನು

(C) ಚೆರುತುರುತಿ

(D) ಕೋಳಿಕ್ಕೋಡ್

57. ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಪ್ರತಿಯಾಗಿ "ಆಪರೇಷನ್ ಸಿಂಧೂರ್" ಹೆಸರಿನಲ್ಲಿ ಪಾಕಿಸ್ತಾನದಲ್ಲಿರುವ ಭಯೋತ್ಪಾದಕ ಶಿಬಿರಗಳ ವಿರುದ್ಧ ಭಾರತ ನಡೆಸಿದ ರಕ್ಷಣಾತ್ಮಕ ದಾಳಿಯ ಬಗ್ಗೆ ರಾಷ್ಟ್ರವನ್ನುದ್ದೇಶಿಸಿ ವಿವರಿಸಲು ನೇಮಕಗೊಂಡ ಇಬ್ಬರು ಮಹಿಳಾ ಸೇನಾಧಿಕಾರಿಗಳು ಯಾರು?

i) ಸೋಫಿಯಾ ಖುರೇಷಿ

ii) ಹಿಮಾಂಶಿ ನರ್ವಾಲ್

iii) ವ್ಯೋಮಿಕಾ ಸಿಂಗ್

iv) ಅಶನ್ಯಾ ದ್ವಿವೇದಿ

(A) i ಮತ್ತು ii

(B) ii ಮತ್ತು iv

(C) i ಮತ್ತು iii

(D) iii ಮತ್ತು iv

58. 2025 ರಲ್ಲಿ ಕೇರಳ ಮಹಿಳಾ ಆಯೋಗದ ಅಧ್ಯಕ್ಷರು ಯಾರು?

(A) ಅಡ್ವೊಕೇಟ್ ಕುಸ್ಟೈಶಾ

(B) ಪಿ. ಸತಿದೇವಿ

(C) ಎ.ಕೆ. ಪ್ರೇಮಜಂ

(D) ವಿ.ಆರ್. ಮಹಿಳಾಮಣಿ

59. ಇ–ಆಡಳಿತ ಎಂದರೇನು?

(A) ಸರ್ಕಾರಿ ಸಾಮಾಜಿಕ ಮಾಧ್ಯಮ ಅಭಿಯಾನಗಳನ್ನು ನಡೆಸುವುದು

(B) ಸರ್ಕಾರಿ ಕಚೇರಿಗಳಲ್ಲಿ ಇಂಟರ್ನೆಟ್ ಬಳಕೆಯನ್ನು ನಿಯಂತ್ರಿಸುವುದು

(C) ಆನ್‌ಲೈನ್ ಸೇವೆಗಳನ್ನು ಬಳಸಿಕೊಂಡು ಖಾಸಗಿ ಕಂಪನಿಯನ್ನು ನಡೆಸುವುದು

(D) ಸರ್ಕಾರಿ ಸೇವೆಗಳನ್ನು ತಲುಪಿಸಲು ಎಲೆಕ್ಟ್ರಾನಿಕ್ ವಿಧಾನಗಳನ್ನು ಬಳಸುವುದು

60. ಈ ಕೆಳಗಿನವುಗಳಲ್ಲಿ ಹಾರ್ಡ್ ಕಾಪಿ ಔಟ್‌ಪುಟ್ ಒದಗಿಸುವ ಕಂಪ್ಯೂಟರ್ ಸಂಬಂಧಿತ ಸಾಧನ ಯಾವುದು?

(A) ಮಾನಿಟರ್

(B) ಮುದ್ರಕ (ಪ್ರಿಂಟರ್)

(C) ಸ್ಪೀಕರ್

(D) ಕೀಬೋರ್ಡ್

61. ಈ ಕೆಳಗಿನವುಗಳಲ್ಲಿ ಯಾವುದು LAN ನ ವ್ಯಾಖ್ಯಾನವಾಗಿದೆ?

(A) ಪ್ರಪಂಚದಾದ್ಯಂತ ಕಂಪ್ಯೂಟರ್‌ಗಳನ್ನು ಸಂಪರ್ಕಿಸುವ ಪ್ರಕ್ರಿಯೆ

(B) ಸಣ್ಣ ಭೌಗೋಳಿಕ ಪ್ರದೇಶದೊಳಗೆ (ಉದಾ: ಕಟ್ಟಡ ಅಥವಾ ಕ್ಯಾಂಪಸ್) ಕಂಪ್ಯೂಟರ್‌ಗಳನ್ನು ಸಂಪರ್ಕಿಸುವ ಪ್ರಕ್ರಿಯೆ.

(C) ವಿವಿಧ ದೇಶಗಳ ಕಂಪ್ಯೂಟರ್‌ಗಳನ್ನು ಸಂಪರ್ಕಿಸುವ ಪ್ರಕ್ರಿಯೆ

(D) ಉಪಗ್ರಹ ಲಿಂಕ್‌ಗಳ ಮೂಲಕ ಮಾತ್ರ ಕಂಪ್ಯೂಟರ್‌ಗಳನ್ನು ಸಂಪರ್ಕಿಸುವ ಪ್ರಕ್ರಿಯೆ

62. ಕೃತಕ ನ್ಯೂರಲ್ ನೆಟ್‌ವರ್ಕ್‌ಗಳನ್ನು ಬಳಸುವ ಯಂತ್ರಗಳನ್ನು ಸಕ್ರಿಯಗೊಳಿಸುವ ಮೂಲಭೂತ ಆವಿಷ್ಕಾರಗಳು ಮತ್ತು ಆವಿಷ್ಕಾರಗಳಿಗಾಗಿ 2024 ರ ಭೌತಶಾಸ್ತ್ರದ ನೊಬೆಲ್ ಪ್ರಶಸ್ತಿಯನ್ನು ಪಡೆದ ವಿಜ್ಞಾನಿಗಳು ಯಾರು?

(A) ಡೇವಿಡ್ ಬೇಕರ್, ಡೆಮಿಸ್ ಹಸ್ಸಾಬಿಸ್, ಜಾನ್ ಜಂಪರ್

(B) ವಿಕ್ಟರ್ ಆಂಬ್ರೋಸ್, ಗ್ಯಾರಿ ರುವ್‌ಕುನ್

(C) ಜಾನ್ ಜೆ. ಹಾಪ್‌ಫೀಲ್ಡ್, ಜೆಫ್ರಿ ಹಿಂಟನ್

(D) ಸೈಮನ್ ಜಾನ್ಸನ್, ಜೇಮ್ಸ್ ಎ. ರಾಬಿನ್ಸನ್

63. ಕ್ವಾಂಟಮ್ ಕಂಪ್ಯೂಟಿಂಗ್ ಆಧರಿಸಿ ಗೂಗಲ್ ನಿರ್ಮಿಸಿದ ಪ್ರೊಸೆಸರ್ ಚಿಪ್ ಯಾವುದು?

(A) ವಿಲೋ (Willow)

(B) ಜಿ.ಪಿ.ಟಿ. 4. ಒ (G. P. T. 4. O)

(C) ಗ್ರೋಕ್ 3 (Grok 3)

(D) ಮಜೋರಾನಾ 1 (Majorana 1)

64. ಗ್ರಾಹಕ ಸಂರಕ್ಷಣಾ ಕಾಯ್ದೆ 2019 ತಿದ್ದುಪಡಿಯಲ್ಲಿ ಈ ಕೆಳಗಿನವುಗಳಲ್ಲಿ ಯಾವುದು ಹೊಸದಾಗಿ ರೂಪುಗೊಂಡಿದೆ?

(A) ಗ್ರಾಹಕ ರಕ್ಷಣಾ ಪ್ರಾಧಿಕಾರ

(B) ಗ್ರಾಹಕ ಸಮಿತಿ

(C) ಗ್ರಾಹಕ ಆಯೋಗ

(D) ಇವುಗಳಲ್ಲಿ ಯಾವುದೂ ಅಲ್ಲ

65. POCSO ಕಾಯ್ದೆಯ ಯಾವ ಸೆಕ್ಷನ್‌ನಲ್ಲಿ ಸುಳ್ಳು ದೂರು ಅಥವಾ ತಪ್ಪು ಮಾಹಿತಿ ನೀಡುವುದಕ್ಕೆ ಶಿಕ್ಷೆಯ ಬಗ್ಗೆ ಪ್ರಸ್ತಾಪಿಸಲಾಗಿದೆ?

(A) ಸೆಕ್ಷನ್ 22

(B) ಸೆಕ್ಷನ್ 17

(C) ಸೆಕ್ಷನ್ 20

(D) ಸೆಕ್ಷನ್ 24

66. ಮಾಹಿತಿ ಹಕ್ಕು ಕಾಯ್ದೆಯನ್ನು ಮೊದಲು ಜಾರಿಗೆ ತಂದ ದೇಶ ಯಾವುದು?

(A) ಭಾರತ

(B) ಚೀನಾ

(C) ಸ್ವೀಡನ್

(D) ಅಮೆರಿಕ

67. ಪೋಷಕರು ಮತ್ತು ಹಿರಿಯ ನಾಗರಿಕರ ರಕ್ಷಣೆಗಾಗಿ ಇರುವ ಕಾನೂನಾದ MWP ಕಾಯ್ದೆಯ ಯಾವ ಅಧ್ಯಾಯದಲ್ಲಿ ವೃದ್ಧಾಶ್ರಮಗಳ ಬಗ್ಗೆ ಪ್ರಸ್ತಾಪಿಸಲಾಗಿದೆ?

(A) ಅಧ್ಯಾಯ 3

(B) ಅಧ್ಯಾಯ 2

(C) ಅಧ್ಯಾಯ 7

(D) ಅಧ್ಯಾಯ 5

68. 2025 ರ ಕಬಡ್ಡಿ ವಿಶ್ವಕಪ್ ನಡೆದ ಸ್ಥಳ ಯಾವುದು?

(A) ಚೀನಾ

(B) ಇಂಗ್ಲೆಂಡ್

(C) ಐರ್ಲೆಂಡ್

(D) ಜಪಾನ್

69. 2025 ರ ಅಂತರರಾಷ್ಟ್ರೀಯ ಬುಕ್ಕರ್ ಪ್ರಶಸ್ತಿಯನ್ನು ಗೆದ್ದ ಕನ್ನಡ ಬರಹಗಾರ್ತಿ ಯಾರು?

(A) ಶಹಜಹಾನ್ ಕರುಣ ತಿಲಕ

(B) ದಮನ್ ಗಲ್ಗರ್ಟ್

(C) ಡಗ್ಲಸ್ ಸ್ಟೀವರ್ಟ್

(D) ಬಾನೋ ಮುಷ್ತಾಖ್

70. ಕೌಟುಂಬಿಕ ಹಿಂಸಾಚಾರ ತಡೆ ಕಾಯ್ದೆಯಡಿಯಲ್ಲಿ ಕೌಟುಂಬಿಕ ಘಟನೆ ವರದಿಯನ್ನು ಯಾರು ಸಿದ್ಧಪಡಿಸಬೇಕು?

1. ಪೊಲೀಸ್ ಅಧಿಕಾರಿ

2. ಸೇವಾ ಪೂರೈಕೆದಾರರು

3. ನ್ಯಾಯಾಧೀಶರು

4. ರಕ್ಷಣಾ ಅಧಿಕಾರಿ

(A) 1 & 3

(B) 2 & 3

(C) 3 & 4

(D) ಮೇಲಿನ ಎಲ್ಲವೂ

71. ಮೂರು ಗಂಟೆಗಳನ್ನು ಕ್ರಮವಾಗಿ 10, 15 ಮತ್ತು 24 ನಿಮಿಷಗಳ ಮಧ್ಯಂತರದಲ್ಲಿ ಬಾರಿಸಲಾಗುತ್ತದೆ. ಬೆಳಿಗ್ಗೆ 8 ಗಂಟೆಗೆ, ಎಲ್ಲಾ ಮೂರು ಗಂಟೆಗಳು ಒಟ್ಟಿಗೆ ಬಾರಿಸಿದರೆ, ಅವು ಮತ್ತೆ ಯಾವ ಸಮಯದಲ್ಲಿ ಒಟ್ಟಿಗೆ ಬಾರಿಸುತ್ತವೆ?

(A) 8 : 49 am

(B) 9 : 25 am

(C) 10 : 45 am

(D) 10 : 00 am

72. $\dfrac{0.003 \times 0.45}{0.009} =$ ________

(A) 0.015

(B) 0.15

(C) 1.5

(D) 15

73. 108 km/h ಎಂದರೆ ________?

(A) 35 m/sec

(B) 30 m/sec

(C) 45 m/sec

(D) 60 m/sec

74. 16 ಪುರುಷರು ಒಂದು ಕೆಲಸವನ್ನು 30 ದಿನಗಳಲ್ಲಿ ಪೂರ್ಣಗೊಳಿಸಬಹುದಾದರೆ, 24 ಪುರುಷರು ಎಷ್ಟು ದಿನಗಳಲ್ಲಿ ಕೆಲಸವನ್ನು ಪೂರ್ಣಗೊಳಿಸುತ್ತಾರೆ?

(A) 22 ದಿನಗಳು

(B) 20 ದಿನಗಳು

(C) 25 ದಿನಗಳು

(D) 15 ದಿನಗಳು

75. 24 ಸೆಂ.ಮೀ. ಎತ್ತರ ಮತ್ತು ಪಾದದ ತ್ರಿಜ್ಯ 6 ಸೆಂ.ಮೀ. ಇರುವ ಒಂದು ಶಂಕುವನ್ನು ಕರಗಿಸಿ ಗೋಳಾಕಾರ ಮಾಡಿದರೆ, ಗೋಳದ ತ್ರಿಜ್ಯ ಎಷ್ಟು?

(A) 6 cm

(B) 8 cm

(C) 3 cm

(D) ಇವುಗಳಲ್ಲಿ ಯಾವುದೂ ಅಲ್ಲ

76. ಗುಂಪಿಗೆ ಸೇರದ ಪದವನ್ನು ಆರಿಸಿ

(A) 24

(B) 72

(C) 36

(D) 168

77. 0, 6, 24, 60, ________

(A) 85

(B) 100

(C) 135

(D) 120

78. WFB, TGD, QHG, ________

(A) NIJ

(B) NIK

(C) NJK

(D) OIK

79. 06/09/2022 ರಿಂದ ಎಂಟು ತಿಂಗಳು ಮತ್ತು ಏಳು ದಿನಗಳು ಪೂರ್ಣಗೊಳ್ಳುವ ದಿನಾಂಕ ಯಾವುದು?

(A) 12/04/2022

(B) 12/05/2022

(C) 12/05/2023

(D) 11/05/2023

80. E = 5 PEN = 35 ಆಗಿದ್ದರೆ, PAGE = ________ ?

(A) 36 (B) 32

(C) 28 (D) 29

**81. Choose the suitable collective noun to complete the phrase given below:**

**A ________ of stairs.**

**(A) flight**

**(B) suite**

**(C) fleet**

**(D) pack**

**82. Add the right question tag to the following statement to make it a question.**

**She seldom goes out, ________?**

**(A) does she?**

**(B) don't she?**

**(C) doesn't she?**

**(D) did she?**

**83. Fill up with the correct preposition:**

**Rohan is interested _______ learning new languages.**

**(A) to** **(B) in**

**(C) with** **(D) for**

**84. Change the following sentence from active to passive form. Choose your answer from the given options:**

**My cousin has drawn this picture.**

**(A) This picture is drawn by my cousin**

**(B) This picture was drawn by my cousin**

**(C) This picture has been drawn by my cousin**

**(D) This picture had been drawn by my cousin**

**85. Fill up suitably:**

**'Wide' means the same as _______.**

**(A) long** **(B) narrow**

**(C) high** **(D) broad**

**86. Replace the underlined word in the following sentence with the suitable phrasal verb:**

**We will <u>cancel</u> the trip if the weather is bad.**

**(A) call off** **(B) call on**

**(C) go off** **(D) go on**

**87. Choose the correctly spelt word from the following:**

**(A) arguement**

**(B) argeument**

**(C) argument**

**(D) argumant**

**88. Change the following sentence into reported speech:**

**"How do you feel this morning?", he asked me.**

**(A) He asked me how I felt this morning**

**(B) He asked me how I feel that morning**

**(C) He asked me how I felt that morning**

**(D) He asked me how I had felt that morning**

89. **Fill up with the correct tense form of the verb given in bracket:**

**When her mother arrived, Isha ______ (finish) the laundry.**

**(A) finished** **(B) has finished**

**(C) will finish** **(D) had finished**

90. **Complete the following sentence suitably:**

**Unless you study well, _______.**

**(A) you will pass**

**(B) you will not pass**

**(C) you could pass**

**(D) you could have passed**

91. ಶುಕ – ಈ ಪದದ ಅರ್ಥ ———— ಆಗಿದೆ.

(A) ಕೋಗಿಲೆ (B) ಪಾರಿವಾಳ

(C) ಕಾಗೆ (D) ಗಿಳಿ

92. ಸದಾನಂದ – ಎಂಬ ಪದವನ್ನು ಈ ರೀತಿ ವಿಂಗಡಿಸಿ ಬರೆಯ ಬಹುದು

(A) ಸದ್ + ಆನಂದ (B) ಸದಾ + ಆನಂದ

(C) ಸತ್ + ಆನಂದ (D) ಸದ + ಆನಂದ

93. ಶಿಶು – ಎಂಬ ಪದವು ಯಾವ ಲಿಂಗವಾಗಿದೆ?

(A) ಪುಲ್ಲಿಂಗ (B) ಸ್ತ್ರೀಲಿಂಗ

(C) ನಪುಂಸಕ ಲಿಂಗ (D) ಯಾವುದೂ ಅಲ್ಲ

94. ಕೆಳಗಿನ ಪದಗಳಲ್ಲಿ ಸಂಖ್ಯಾವಾಚಕವಿರುವ ಪದ ಯಾವುದು?

(A) ಇಬ್ಭಾಗ (B) ಅಬ್ಬರ

(C) ಕರ್ಬೊಗೆ (D) ಅಂಬರ

95. ಕಾಗುಣಿತ ದೋಷವಿಲ್ಲದ ಸರಿಯಾದ ಪದ ಯಾವುದು?

(A) ಪ್ರಥರ್ಶನ (B) ಪ್ರದರ್ಶನ

(C) ಪೃದರ್ಶನ (D) ಪ್ರದರ್ಶಣ

96. ‘ತಿರುಕನ ಕನಸು’ – ನುಡಿಗಟ್ಟನ್ನು ಈ ಅರ್ಥದಲ್ಲಿ ಬಳಸಲಾಗುತ್ತದೆ.

(A) ಈಡೇರದ ಬಯಕೆ

(B) ನೆರವೇರಿದ ಬಯಕೆ

(C) ಈಡೇರಿದ ಬಯಕೆ

(D) ನೆರವೇರುವ ಬಯಕೆ

97. ಕೆಳಗೆ ನೀಡಲಾದ ಪದಗಳಲ್ಲಿ ದ್ವಿರುಕ್ತಿ ಪದ ಯಾವುದು?

(A) ಪಟ ಪಟ
(B) ಬೇಗ ಬೇಗ
(C) ಗಡ ಗಡ
(D) ದಬ ದಬ

98. ಸಜ್ಜನ – ಪದದ ವಿರೋಧಾರ್ಥ ಪದ ಯಾವುದು?

(A) ಸುಜನ
(B) ಒಳ್ಳೆಯ ಜನ
(C) ವಿಜನ
(D) ದುರ್ಜನ

99. ರಾಕ್ಷಸ – ಎಂಬ ಪದದ ಪರ್ಯಾಯ ಪದಗಳನ್ನು ಗುರುತಿಸಿರಿ

i) ಅಸುರ

ii) ದ್ವಿಜ

iii) ದಾನವ

(A) i ಮತ್ತು iii
(B) i ಮತ್ತು ii
(C) ii ಮತ್ತು iii
(D) ಯಾವುದೂ ಅಲ್ಲ

100. ತಾಣ – ಪದದ ಸಂಸ್ಕೃತ ರೂಪ ——— ಆಗಿದೆ.

(A) ಯಾನ
(B) ಸ್ಥಾನ
(C) ಮ್ಲಾನ
(D) ಗ್ಯಾನ

SPACE FOR ROUGH WORK

SPACE FOR ROUGH WORK

## SPACE FOR ROUGH WORK